ರಾಜ್ಯದಲ್ಲಿರುವ ಅರೇಬಿಕ್ ಶಾಲೆಗಳು

೧೮೧ (ಖ್ಯಳ) ಶ್ರೀ ಎ. ಎಂ. ಹಿಂಡಸಗೇರಿ (ಹುಬ್ಬಳ್ಳಿ ನಗರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿರುವ ಒಟ್ಟು ಅರೇಬಿಕ್ ಶಾಲೆಗಳ ಸಂಖ್ಯೆ ಎಷ್ಟು ? ಈ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ವಿವರ ನೀಡುವುದು)

ಆ) ಈ ಶಾಲೆಗಳಿಗೆ ಅನುದಾನ ನೀಡುವುದನ್ನು ನಿಲ್ಲಿಸಿದ್ದ ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ಒಟ್ಟು ಅರೇಬಿಕ್ ಶಾಲೆಗಳ ಸಂಖ್ಯೆ ೬೨ ವಿದ್ಯಾರ್ಥಿಗಳ ಸಂಖ್ಯೆಯು ಸಧ್ಯಕ್ಕೆ ಲಭ್ಯವಿರುವುದಿಲ್ಲ. ನಂತರ ಒದಗಿಸಲಾಗುವುದು.

ಆ) ಹೌದು. ಸರ್ಕಾರದ ಶೂನ್ಯಾಧಾರಿತ ಕಾರ್ಯ ನೀತಿಯಂತೆ ಸದರಿ ಯೋಜನೆಯನ್ನು ಸಧ್ಯಕ್ಕೆ ಕೈಬಿಡಲಾಗುವುದು.

೧೦-೦೦ ಎ. ಎಂ.

ಶ್ರೀ ಎ. ಎಂ. ಹಿಂಡಸಗೇರಿ.—ಅಧ್ಯಕ್ಷರೇ, ಮಾನ್ಯ ಮಂತ್ರಿಯವರು, ಒಟ್ಟು ಅರೇಬಿಕ್ ಶಾಲೆಗಳು ೯೨ ಇವೆ ಎಂದು ಹೇಳಿದ್ದಾರೆ. ಇವುಗಳಿವೆ, ಎಷ್ಟು ಗ್ರಾಂಟ್ಸ್ ಕೊಟ್ಟಿದ್ದರು ಎಂಬ ಬಗ್ಗೆ ಫಿಗರ್ ಹೇಳಿದರೆ ಚೆನ್ನಾಗಿರುತ್ತದೆ.

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೇ, ನವೆಂಬರ್ ವರೆಗೆ ೬.೬ ಲಕ್ಷ ರೂಪಾಯಿಗಳು ಬೇಕಾಗಿತ್ತು. ಈ ಹಿಂದೆ ಏನಾಯಿತು ಎಂದರೆ ೧-೪-೧೯೮೮ರಲ್ಲಿ ಕೆಲವು ವಿಷಯಗಳ ಬಗ್ಗೆ ಈ ಅರಾಬಿಕ್ ಶಾಲೆಗಳಿಗೆ ಬಿಡುಗಡೆ ಮಾಡುತ್ತಿದ್ದ ಅನುದಾನವನ್ನು, ಶೂನ್ಯಾಧಾರಿತ ಕಾರ್ಯ ನೀತಿಯಂತೆ ನಿಲ್ಲಿಸಿದ್ದೆವು. ಆದರೆ ಅನೇಕ ಕಡೆಯಿಂದ ಹಾಗೂ ಶಾಸಕರಿಂದ ಬೇಡಿಕೆ ಬಂದಮೇಲೆ ಮತ್ತೆ ಆರ್ಥಿಕ ಇಲಾಖೆಯವರನ್ನು ಸಂಪರ್ಕ ಮಾಡಿ, ನವೆಂಬರ್‌ವರೆಗೆ ಅನುದಾನವನ್ನು ಬಿಡುಗಡೆ ಮಾಡಿದ್ದೇವೆ. ಮತ್ತೆ ಡಿಸೆಂಬರ್‌ವರೆಗೆ ಕೊಡುವುದಕ್ಕೂ ಹೇಳಿದ್ದೇವೆ. ಒಂದು ಸಾರಿ ಗ್ರಾಂಟ್ ಇನ್ ಏಡ್ ರೂಲ್ಸ್ ಪ್ರಕಾರ ಅಳವಡಿಸಿದ ಮೇಲೆ, ಗ್ರಾಂಟ್ಸ್ ನಿಲ್ಲಿಸುವುದು ಸೂಕ್ತವಲ್ಲವೆಂದು ನಮ್ಮ ಅಭಿಪ್ರಾಯವು. ಈ ಕಾರಣದಿಂದ ಆರ್ಥಿಕ ಇಲಾಖೆಯವರ ಸಂಪರ್ಕ ಮಾಡಿ, ಮುಂದೆ ಕ್ರಮ ತೆಗೆದುಕೊಳ್ಳಲಾಗುವುದು.

ತುಮಕೂರು ಜಿಲ್ಲೆಯಲ್ಲಿ ಶಿಕ್ಷಕರ ನೇಮಕಾತಿ

೧೮೨ (೬೮೨) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಇತ್ತೀಚೆಗೆ ತುಮಕೂರು ಜಿಲ್ಲೆಯಲ್ಲಿ ನೇಮಕಾತಿ ಸಮಿತಿಯು ಪ್ರೌಢಶಾಲಾ ಶಿಕ್ಷಕರನ್ನು ನೇಮಿಸಿರುವುದು ನಿಜವಲ್ಲವೇ ?

ಆ) ಆಗಿದ್ದಲ್ಲಿ ಎಷ್ಟು ಮಂದಿ ಶಿಕ್ಷಕರನ್ನು ನೇಮಿಸಲಾಯಿತು ?

ಇ) ಈ ರೀತಿ ನೇಮಿಸಲಾದ ಶಿಕ್ಷಕರ ಪೈಕಿ ವಯಸ್ಸಿನ ವಯೋಮಿತಿ ಮೀರುತ್ತಿರುವ ಎಷ್ಟು ಶಿಕ್ಷಕರನ್ನು ಆಯ್ಕೆ ಮಾಡಲಾಗಿದೆ ?

ಈ) ಇಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು ?

ಶ್ರೀಮತಿ ಲೀಲಾದೇವಿ. ಆರ್. ಪ್ರಸಾದ್ (ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ಹೌದು.